ಉಪಯೋಗ ಮಾಡತಕ್ಕಂತಾದ್ದು ಒಂದು ಕಡೆ. ಆದರೆ ಸರ್ಪ್ಲಸ್ ನೀರನ್ನು ನಾವು ದಕ್ಕಿಸಿಕೊಳ್ಳುತ್ತೇವೆಂದು ಅವರು ಹೊರಟಿದ್ದರೆ, ಆಥವಾ ಆ ಒಂದು ಹಕ್ಕನ್ನು ನ್ಯಾಪನೆ ಮಾಡಬೇಕೆಂದು ತಿಳಿದುಕೊಂಡಿದ್ದರೆ ಅದು ಸಾಧ್ಯವಾಗುವುದಿಲ್ಲ. ಆಂಧ್ರದಲ್ಲಿ ಅವರು ಭಾಷಣ ಮಾಡಿದುದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆಯೇ? ಅಲ್ಲಿ ಪ್ರಶ್ನೆ ಕೇಳುವುದನ್ನು ನಿಲ್ಲಿಸುವುದಕ್ಕಾಗುತ್ತದೆಯೇ? ಅಲ್ಲಿಯೂ ಕೂಡ ನೀರಾವರಿ ಮಂತ್ರಿಗಳಿಗೆ ಪ್ರಶ್ನೆ ಕೇಳಿ, ಅವರಿಂದ ಉತ್ತರ ಪಡೆಯುತ್ತಾರೆ. ನಮ್ಮ ನ್ಯಾಯಾಧೀಶರು ಕೊಟ್ಟ ತೀರ್ಪಿನ ಪ್ರಕಾರ ಯಾವುದೇ ಕಾರಣದಿಂದ ಆ ಒಂದು ಹಕ್ಕು ಬರುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ,—ಮೊದಲು ಎಷ್ಟಿಮೇಟ್ ಎಷ್ಟಿತ್ತು, ಈಗ ಎಸ್ಕಲೇಷನ್ ಎಷ್ಟಾಗಿದೆ?

ಶ್ರೀ ಹೆಚ್.ಡಿ. ದೇವೇಗೌಡ.—ಇದು ಒಂದೊಂದು ಹಂತಕ್ಕೂ ಬೇರೆ ಬೇರೆ ಆಗುತ್ತದೆ. ಒಂದು ಕಡೆ ೧೦೭೦ ಕೋಟಿ ಇರಬಹುದು. ಇನ್ನೊಂದು ೫೫೦ ಕೋಟಿ ಇರಬಹುದು. ಇದು ಸ್ಟೇಜಸ್ ಟು ಸ್ಟೇಜಸ್ ಬೇರೆ ಆಗುತ್ತದೆ.

ವಿಕ್ಟೋರಿಯ ಆಸ್ಪತ್ರೆಗಾಗಿ ಬಹುಮಹಡಿ ಕಟ್ಟಡ

೧೩೦ (೪೭೯) ಶ್ರೀ ಕೆ. ಜೆ. ಜಾರ್ಜ್ (ಭಾರತಿ ನಗರ).—ಮಾನ್ಯ ಲೋಕೋಪಯೋಗಿ, ಜಲಾನಯನ ಪ್ರದೇಶಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :—

ಅ) ವಿಕ್ಟೋರಿಯಾ ಮತ್ತು ವಾಣಿ ವಿಲಾಸ ಆಸ್ಪತ್ರೆಯ ಯೋಜನೆಯ ಕಟ್ಟಡದ ಮೂಲ ಅಂದಾಜು ಯಾವಾಗ ಮಂಜೂರಾತಿ ಪಡೆಯಿತು ?

ಆ) ಯಾವಾಗ ಕೆಲಸಗಳನ್ನು ಪ್ರಾರಂಭಿಸಲಾಯಿತು ?

ಇ) ಇದಕ್ಕೆ ಈವರೆಗೆ ಖರ್ಚು ಮಾಡಿರುವ ಹಣವೆಷ್ಟು ?

೧) ವಿಕ್ಟೋರಿಯಾ ಆಸ್ಪತ್ರೆ.

೨) ವಾಣಿ ವಿಲಾಸ ಆಸ್ಪತ್ರೆ.

ಈ) ಈವರೆಗೆ ಮುಗಿದಿರುವ ನೆಲ ಅಂತಸ್ತುಗಳು ಎಷ್ಟು ?

೧) ವಿಕ್ಟೋರಿಯಾ ಆಸ್ಪತ್ರೆ.

೨) ವಾಣಿ ವಿಲಾಸ ಆಸ್ಪತ್ರೆ.

ಉ) ಪರಿಷ್ಕೃತ ಅಂದಾಜಿನ ಮೊತ್ತವೆಷ್ಟು ?

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—

ಅ) ಅಂದಾಜು ಪಟ್ಟಿಯನ್ನು ಮಂಜೂರು ಮಾಡಲಾಗಿಲ್ಲ. ಯೋಜನೆಯ ಕೆಲಸಗಳನ್ನು ಕೈಗೆತ್ತಿಕೊಳ್ಳಲು ೧೯೮೧ನೇ ಫೆಬ್ರವರಿಯಲ್ಲಿ ಸರ್ಕಾರಿ ಆಜ್ಞೆ ಸಂಖ್ಯೆ ಹೆಚ್.ಎಫ್.ಡಬ್ಲ್ಯೂ ೨೮ ಬಿ.ಆರ್.ಎ ೮೦ ದಿನಾಂಕ ೧೦-೪-೮೧ರ ಆಜ್ಞೆಯು ಮೂಲಕ ದೊರೆಯಿತು.

ಆ) ೧೯೮೧ರ ಆಗಸ್ಟ್ ತಿಂಗಳಿನಲ್ಲಿ.

ಇ) ೧) ವಿಕ್ಟೋರಿಯ ರೂ. ೨೪೬.೯೭ ಲಕ್ಷ.

೨) ವಾಣಿ ವಿಲಾಸ ರೂ. ೧೧೬.೧೭ ಲಕ್ಷ.

ಒಟ್ಟು ರೂ. ೩೫೪.೧೪ ಲಕ್ಷ.

ಈ) ೧) ವಿಕ್ಟೋರಿಯ ಆಸ್ಪತ್ರೆ : ನೆಲಮಾಳಿಗೆಯ ಕಟ್ಟಡದ ಕೆಲಸ ಮುಗಿದಿದ್ದು ಉಳಿದ ಕೆಲಸಗಳು ನಡೆಯುತ್ತಾ ಇದೆ.

೨) ವಾಣಿ ವಿಲಾಸ ಆಸ್ಪತ್ರೆ : ನೆಲಮಹಡಿ ಮತ್ತು ಮೊದಲನೇ ಅಂತಸ್ತಿನ ಎಲ್ಲ ಕೆಲಸಗಳು ಮುಗಿದಿದ್ದು, ಆಸ್ಪತ್ರೆ ಅಧಿಕಾರಿಗಳಿಗೆ ಬಿಟ್ಟು ಕೊಡಲಾಗಿದೆ. ಎರಡನೇ ಮಹಡಿ ಕೆಲಸಗಳು ಮುಕ್ತಾಯ ಹಂತದಲ್ಲಿದೆ.

ಉ) ಮೊದಲಿನ ಹಂತದ ಕೆಲಸಗಳಿಗೆ ೧೧೬೦ ಲಕ್ಷ ರೂ.ಗಳ ಅಂದಾಜು ಮಾಡಲಾಗಿದೆ.

ಪ್ರಶ್ನೆ ಸಂಖ್ಯೆ ೧೨೯ (೩೫೨) ಶ್ರೀ ಕೆ.ಬಿ. ಮಲ್ಲಪ್ಪ (ಮಾನ್ಯ ಸದಸ್ಯರು ಗೈರು ಹಾಜರಾಗಿದ್ದರು)

ಶ್ರೀ ಕೆ.ಜೆ. ಜಾರ್ಜ್. ಮಾನ್ಯ ಅಧ್ಯಕ್ಷರೇ, ಇಷ್ಟು ದೊಡ್ಡ ಕೆಲಸವನ್ನು ಎಸ್ಟಿಮೇಟ್, ಕಾಸ್ಟ್, ಮಂಜೂರಾಗಿತ್ತೆ ಪ್ರಾರಂಭ ಮಾಡಿದ್ದಾರೆಯೇ ? ಮತ್ತು ಮೊದಲನೆಯ ಪ್ಲಾನ್ ಪ್ರಕಾರ ಎಷ್ಟು ಫ್ಲೋರ್ ಕಟ್ಟುವ ಅಂದಾಜು ಇತ್ತು. ಈಗ ೧೧ ಕೋಟಿ ೬೦ ಲಕ್ಷ ರೂಪಾಯಿನಲ್ಲಿ ಎಷ್ಟು ಫ್ಲೋರ್ ಕಟ್ಟುತ್ತಿದ್ದಾರೆ ಎನ್ನುವುದನ್ನು ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೇ, ಇದು ಎಸ್ಟಿಮೇಟ್ ಆಗದೇ ಕೆಲಸ ಶುರುವಾಯಿತು. ಇದಕ್ಕೆ ಒಂದು ಮಾಸ್ಟರ್ ಪ್ಲಾನ್ ಮಾಡಿದರು. ಮಾಸ್ಟರ್ ಪ್ಲಾನ್ ಏಂದು ಮಾಡಿ, ಎಸ್ಟಿಮೇಟ್ ಮತ್ತೊಂದು ಮಾಡಿಕೊಂಡರು. ಆದರೆ ಡೀಟೇಲ್ ಎಸ್ಟ್ಮೇಟ್ ಮಾಡಲಿಲ್ಲ. ಈ ಮಾಸ್ಟರ್ ಪ್ಲಾನ್‌ಗೆ ನಾನು ಅವಿಗಲ್ಲು ಹಾಕಿದ್ದೇನೆ. ಈ ರೀತಿ ಹೇಳಿದರೆ ನಾನು ಆರೋಪಣೆ ಮಾಡುತ್ತಿದ್ದೇನೆಂದು ಯಾರೂ ತಿಳಿದುಕೊಳ್ಳಬಾರದು. ಇದು ಮಾಸ್ಟರ್‌ವಾಂಶ ಈ ಮಾಸ್ಟರ್ ಪ್ಲಾನನ್ನು ೧೪-೪-೮೧ ರಲ್ಲಿ ತಯಾರು ಮಾಡಿದ್ದಾರೆ. ಇದು ಆದ ಮೇಲೆ ಈಗ ಇದಕ್ಕೆ ಮಂಜೂರಾತಿ ಕೊಡಬೇಕೆಂದರೆ ೨೫-೩೦ ಕೋಟಿ ರೂಪಾಯಿಗಳಾಗುತ್ತವೆ. ಆದುದರಿಂದ ಇದಕ್ಕೆ ಕೈಹಾಕುವುದಕ್ಕೆ ಹೋಗಿಲ್ಲ. ನಮ್ಮ ಬಜೆಟ್‌ನ್ನು ಗಮನದಲ್ಲಿ ಇಟ್ಟುಕೊಂಡು ಮಾಸ್ಟರ್ ಪ್ಲಾನ್ ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ನಾವು ಯೋಜನೆ ಮಾಡಿರತಕ್ಕದ್ದು ಹಣಕಾಸಿನ ಪರಿಸ್ಥಿತಿಗೆ ಹೊಂದಿಕೆಯಾಗುವಂತಹದ್ದು. ಇದು ಡಿಲೇ ಆಗಿದ್ದರೆ ಇದಕ್ಕೆ ಕಾರಣ ಹಿಂದೆ ಏನು ತೀರ್ಮಾನ ಮಾಡಿದ್ದರು, ಅದರ ಪ್ರಕಾರ ಇದಕ್ಕೆ ೩೦ ಕೋಟಿ ರೂಪಾಯಿ ಕೊಡುವುದಕ್ಕೆ ಶಕ್ತಿ ಇಲ್ಲ. ಅದಕ್ಕೋಸ್ಕರ ಏನು ಮಾಡಿದ್ದೇವೆ, ವಿಕ್ಟೋರಿಯಾ ಹಾಸ್ಪಿಟಲ್‌ನಲ್ಲಿ ಬೇಸ್‌ಮೆಂಟ್, ಗ್ರೌಂಡ್ ಮತ್ತು ಫಸ್ಟ್ ಫ್ಲೋರ್‌ಗೆ ೮.೫೫ ಕೋಟಿ. ಹಾಗೂ ವಾಣಿ ವಿಲಾಸ ಹಾಸ್ಪಿಟಲ್‌ನ ಸರ್ಜಿಕಲ್ ಬ್ಲಾಕ್‌ಗೆ ೩ ೧೦ ಕೋಟಿ, ಒಟ್ಟು ೧೧ ಕೋಟಿ ೬೦ ಲಕ್ಷ ರೂಪಾಯಿ ಖರ್ಚು ಮಾಡಬೇಕೆಂದು ಹೇಳಿ. ಆರ್ಕಿಟೆಕ್ಟ್ ಇತ್ಯಾದಿ ಪ್ರತಿಯೊಂದು ಫಾರ್ಮಾಲಿಟಿ ಏನು ಆಗಬೇಕಾಗಿದೆ ಅದನ್ನು ಮುಗಿಸಿ, ಅದಕ್ಕೆ ಮಂಜೂರಾತಿ ಕೊಡುವ ಹಂತದಲ್ಲಿದೆ. ಇಲ್ಲಿಯವರೆಗೆ ಇದಕ್ಕಾಗಿ ೩೫೧.೧೪ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ.

ಶ್ರೀ ಕೆ.ಜೆ. ಜಾರ್ಜ್. ಮಾನ್ಯ ಅಧ್ಯಕ್ಷರೇ, ಈ ಗೌರ್ನಮೆಂಟ್ ಆರ್ಡರ್ ಕಾಪಿ ಕೊಡುತ್ತೀರಾ ? ಜಿ.ಒ. ನಂಬರ್ ಹೆಚ್.ಎಫ್.ಡಬ್ಲ್ಯೂ ೯೮ ಬಿ.ಆರ್.ಎ ೮೦ ದಿನಾಂಕ ೧೩-೪-೮೧ರ ಸರ್ಕಾರಿ ಆಜ್ಞೆಯ ಒಂದು ಕಾಪಿಯನ್ನು ತಾವು ಕೊಟ್ಟರೆ ಚೆನ್ನಾಗಿರುತ್ತದೆ.

ಶ್ರೀ ಹೆಚ್.ಡಿ. ದೇವೇಗೌಡ. ಅದರೊಳಗೆ ಏನೂ ಇಲ್ಲ, ಕೆಲಸ ಶುರು ಮಾಡಿ ಎಂದು ಒಂದು ಜಿ.ಒ. ಮಾಡಿದ್ದಾರೆ. ಮಾಸ್ಟರ್ ಪ್ಲಾನ್‌ಗೆ ಹೊಂದಿಕೊಳ್ಳುವ ಹಾಗೆ ಕೆಲಸ ಶುರು ಮಾಡಿ ಎಂದು ಹೇಳಿದ್ದಾರೆ. ಅದು ಪಬ್ಲಿಕ್ ಡಾಕ್ಯುಮೆಂಟ್.

ಶಿವಮೊಗ್ಗ ಜಿಲ್ಲೆಗೆ ತುಂಬಾ ಕೆಳಮಟ್ಟದ ಏತ ನೀರಾವರಿ ಯೋಜನೆಯಿಂದ ಒದಗಿಸಲಾದ ಸೌಲಭ್ಯಗಳು

೧೩೧(೨೧೪) ಕೆ.ಹೆಚ್. ಶ್ರೀನಿವಾಸ್(ಶಿವಮೊಗ್ಗ).—ಮಾನ್ಯ ಲೋಕೋಪಯೋಗಿ ಜಲಾಯನ ಪ್ರದೇಶಾಭಿವೃದ್ಧಿ ಹಾಗೂ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ :—

ಅ) ೧೯೮೬-೮೭ ಆಯವ್ಯಯದಲ್ಲಿ ಶಿವಮೊಗ್ಗದ ತುಂಬಾ ಕೆಳಮಟ್ಟದ ಏತನೀರಾವರಿ ಯೋಜನೆ ಸೇರಿರುವುದು ನಿಜವಲ್ಲವೇ ?